ಚಿಕ್ಕಪೇಟೆ ಕ್ಷೇತ್ರದ ಒಳಚರಂಡಿ ಪೈಪುಗಳ ಬದಲಾವಣೆ.

392 - ಶ್ರೀ ಪಿ.ಎಸ್. ಪ್ರಕಾಶ್ (ಚಿಕ್ಕಪೇಟೆ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಒಳಚರಂಡಿ ಪೈಪುಗಳನ್ನು ಬದಲಾವಣೆ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆಯೇ?*

2. *ಅಕ್ಕಿಪೇಟೆ, ಸಂತೋಷ ಪೇಟೆ ಮನವರ್ತಿ ಪೇಟೆ ಮತ್ತು ಪಾರ್ಕ್ ರಸ್ತೆ ಇಲ್ಲಿ ಒಳಚರಂಡಿ ಪೈಪುಗಳನ್ನು ಬದಲಾವಣೆ ಮಾಡುವ ಯಾವ ಕ್ರಮ ಕೈಗೊಳ್ಳಲಾಗಿದೆ.*

3. *ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ನೂತನ ಬೋರ್‌ವೆಲ್‌ಗಳನ್ನು ಕೊರೆಯುವ ಕಾರ್ಯ ಕೈಗೊಳ್ಳಲಾಗಿದೆಯೇ?*

4. *ಒಳಚರಂಡಿ ನೀರನ್ನು ಶುದ್ದೀಕರಿಸುವ ಯಂತ್ರಗಳು ಎಷ್ಟು ಇವೆ?*

5. *ಒಳಚರಂಡಿ ನೀರನ್ನು ಸ್ವಚ್ಛಗೊಳಿಸಲು ಸಿಬ್ಬಂದಿ ಕೊರತೆ ಇದ್ದು ಈ ಕೊರತೆ ತುಂಬಲು 4ನೇ ದರ್ಜೆ ನೌಕರರನ್ನು ನೇಮಕ ಮಾಡಿಕೊಳ್ಳುವ ಪ್ರಸ್ತಾವನೆ ಮಂಡಳಿಯ ಮುಂದೆ ಇದೆಯೇ?*

ಶ್ರೀ ಅನಂತ್ ನಾಗ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು) :

1. ಒಳಚರಂಡಿ ನೀರನ್ನು ಶುದ್ದೀಕರಿಸುವ ಯಂತ್ರಗಳಿಂದ ಒಳಚರಂಡಿಯ ಕೊಳವೆಗಳಲ್ಲಿಯ ಹೂಳು ತೆಗೆಯುವ ಕಾರ್ಯವನ್ನು ಸದ್ಯದಲ್ಲಿ ಪ್ರಾರಂಭಿಸಲಾಗುವುದು. ಆಗ ಒಳಚರಂಡಿ ಪೈಪುಗಳನ್ನು ಬದಲಾಯಿಸುವುದು. ಆಗ ಒಳಚರಂಡಿ ಪೈಪುಗಳನ್ನು ಬದಲಾಯಿಸುವ ಕಾರ್ಯವನ್ನು ಟೆಂಡರ್ ನಿಯೋಜನೆ ಕಾರ್ಯಕ್ರಮದಡಿಯಲ್ಲಿ ಅದ್ಯತೆಯ ಮೇರೆಗೆ ತೆಗೆದುಕೊಳ್ಳಲು ಹಮ್ಮಿಕೊಂಡಿದೆ.

2. ಈ ಕಾಮಗಾರಿಗೆ ಈಗಾಗಲೇ ಪುನಃ ಟೆಂಡರ್ ಕರೆಯಲಾಗಿದ್ದು ಟೆಂಡರ್ ಪ್ರಕ್ರಿಯೆ ಮುಗಿದ ಕೂಡಲೇ ಕಾರ್ಯ ಕೈಗೆತ್ತಿಕೊಳ್ಳಲಾಗುವುದು.

3. ನೂತನವಾಗಿ ಬೆಂಗಳೂರಲ್ಲಿ ಕೊಳವೆ ಬಾವಿ ಕೊರೆಯಲು 253.5 ಲಕ್ಷ ರೂ.ಗಳ ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಮುಆ (ಪ್ರಾ) : ಆಆ-1ಃತಾಸ-9ಃಯೋ-2:5295, ದಿನಾಂಕ : 28 : 11 : 97 ರಂದು ಕಳುಹಿಸಿದ್ದ ಸರ್ಕಾರದಿಂದ ಅನುದಾನ ಬಂದ ಕೂಡಲೇ ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

4. ಒಳಚರಂಡಿ ನೀರನ್ನು ಶುದ್ದೀಕರಿಸುವ 5 ಯಂತ್ರಗಳು ಇವೆ.

5. ನಿರ್ಮಲೀಕರಣ ಸಿಬ್ಬಂದಿ ನೇಮಕಾತಿ ಕುರಿತು ಸರ್ಕಾರದ ಅನುಮೋದನೆ ದೊರಕಿದೆ. ಮಂಡಳಿಯ ವ್ಯಂದ ಮತ್ತು ನೇಮಕಾತಿಗೆ ತಿದ್ದುಪಡಿಗೆ ಸರ್ಕಾರದ ಅನುಮೋದನೆ ನಿರೀಕ್ಷಿಸಲಾಗಿದೆ. ತದನಂತರ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

ಶ್ರೀ ಪಿ.ಎಸ್. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಒಳಚರಂಡಿ ಪೈಪುಗಳನ್ನು ಬದಲಾವಣೆ ಮಾಡಬೇಕೆಂದು ಅನೇಕ ಸಲ ಸದನದಲ್ಲಿ ಕೇಳಿದ್ದೇನೆ. ಮಾನ್ಯ ನಗರಾಭಿವೃದ್ಧಿ ಸಚಿವರು ಕೆಲವು ಕಡೆ ಪೈಪುಗಳನ್ನು ಬದಲಾವಣೆ ಮಾಡಿಸಿದರು. ಆದರೆ ಅವರೆಲ್ಲಿ ಗುದ್ದಲಿ ಪೂಜೆ ಮಾಡಿದ್ದಾರೆ ಅಲ್ಲೇ ಇನ್ನೂ ಕೆಲಸವಾಗಿಲ್ಲ, ಅರ್ಧಬರ್ಧ ಕೆಲಸವಾಗಿದೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ? ಅಕ್ಕಿ ಪೇಟೆ, ಸಂತೋಷಪೇಟೆ, ಮನವರ್ತಿಪೇಟೆ, ಪಾರ್ಕ್ ರಸ್ತೆ ಇಲ್ಲಿ ಡೆಡ್ಲಿ ಮೂರುವರೆ ಲಕ್ಷದ ಟೆಂಡರನ್ನು ಕರೆದು ಗುದ್ದಲಿ ಪೂಜೆ ಮಾಡಿ ಕೆಲಸ ಪ್ರಾರಂಭ ಮಾಡಿ ಮಣ್ಣಿನ ಕೆಲಸವನ್ನೂ ಸಹ ಮಾಡಲಾಗಿತ್ತು. ಆದರೆ ಆ ಕೆಲಸ ಪೂರ್ಣವಾಗಿಲ್ಲ, ಕೆಲಸವನ್ನು ನಿಲ್ಲಿಸಿಬಿಟ್ಟರು. ಅಲ್ಲಿರತಕ್ಕ ಪೈಪುಗಳನ್ನೆಲ್ಲಾ ಚಿಕ್ಕಲಾಲ್‌ಬಾಗ್‌ನಲ್ಲಿ ತಂದುಹಾಕಿಕೊಂಡಿದ್ದಾರೆ ಕಳೆದ ಮೂರು ವರ್ಷಗಳಿಂದ ಅಲ್ಲಿ ಒಂದೂ ಬೋರ್‌ವೆಲ್‌ಗಳನ್ನು ತೋಡಿಲ್ಲ. ಕೊರೆದಿರುವ ಬೋರ್‌ವೆಲ್‌ಗಳಿಗೆ ಮಿನಿ ವಾಟರ್ ಟ್ಯಾಂಕ್‌ಗಳೆಂದು ಮಾಡಿ ಅದಕ್ಕೆ ಇದುವರೆಗೂ ಕೆಇಬಿನವರು ವಿದ್ಯುತ್ ಸಂಪರ್ಕವನ್ನು ಕೊಟ್ಟಿಲ್ಲ. ಇದರ ಬಗ್ಗೆ ಹಲವಾರು ಸಲ ಪತ್ರವನ್ನು ಬರೆದರೂ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ತೆಗೆದುಕೊಂಡಿಲ್ಲ.

11.50 ಎ.ಎಂ.

ಶ್ರೀ ಅನಂತ್‌ನಾಗ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ಪ್ರಶ್ನೆಗಳಿಗೆ ಈಗಾಗಲೇ ಇಲ್ಲಿ ಉತ್ತರ ಕೊಡಲಾಗಿದೆ. ಮಾನ್ಯ ಸದಸ್ಯರ ಜೊತೆಯಲ್ಲೇ ನಾನು ಗುದಲಿ ಪೂಜೆ ನಡೆಸಿದ್ದೇನೆ. ಅವರೇ ಹೇಳಿದಂತೆ ಕೆಲವು ಕಡೆ ಅರ್ಧಂಬರ್ಧ ಕೆಲಸ ಆಗಿದೆ. ಆದರೆ ಇದ್ದಕ್ಕಿದ್ದ ಹಾಗೆ ಮತ್ತೊಂದು ಸಲ ಟೆಂಡರ್ ಮಾಡಿದಾಗ ಎಸ್ಟಿಮೇಟ್‌ಗಿಂತ ಶೇಕಡ 180-190ರಷ್ಟು ಗುತ್ತಿಗೆದಾರರು ಹೆಚ್ಚು ಕೇಳಿದ್ದರಿಂದ, ಅದನ್ನು ಮತ್ತೆ ಮೂರನೆಯ ಬಾರಿಗೆ ಟೆಂಡರ್ ಕರೆದಿದ್ದೇವೆ. ಇವತ್ತೇ ಈ ಪ್ರಶ್ನೆ ಓದಿದ ನಂತರ ನಾನು ಮಾನ್ಯ ಸದಸ್ಯರ ಜೊತೆಗೆ ಈ ಬಗ್ಗೆ ಮಾತನಾಡಿದ್ದೇನೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಗೂ ಕೂಡ ನಾನು ಮಾತನಾಡಿದ್ದೇನೆ. ಈ ಕಾಮಗಾರಿಗಳನ್ನು ನಾವು ಆದಷ್ಟು ಬೇಗ ಕೈಗೆತ್ತಿಕೊಂಡು ಮುಗಿಸುತ್ತೇವೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ನೀಡಬಯಸುತ್ತೇನೆ. ಬೋರ್‌ವೆಲ್‌ಗಳ ಕುರಿತು ಹೇಳುವುದಾದರೆ, ಬೆಂಗಳೂರು ನಗರದ ಬಡಾವಣೆಗಳಲ್ಲಿ ತಕ್ಷಣಕ್ಕೆ ಒಂದೊಂದು ಬೋರ್‌ವೆಲ್ ಹಾಗೂ ಹೊಸ ಬಡಾವಣೆಗಳಲ್ಲಿ ಐದು ಬೋರ್‌ವೆಲ್‌ಗಳನ್ನು ತೋಡುವುದಕ್ಕೆ ನಾವು ಸರ್ಕಾರಕ್ಕೆ ಅನುದಾನ ಕೇಳಿದ್ದೇವೆ. ಸರ್ಕಾರದಿಂದ ಹಣ ಬಂದ ತಕ್ಷಣ ಇದನ್ನು ಕೈಗೊಳ್ಳುತ್ತೇವೆ.

ಶ್ರೀ ಪಿ.ಎಸ್. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಅಕ್ಕಿಪೇಟೆಯಲ್ಲಿ ಟೆಂಡರ್ ಕರೆದು ವರ್ಕ್ ಆರ್ಡರ್ ಇಶ್ಯೂ ಮಾಡಿ; ಮೂರು ವರ್ಷವಾಯಿತು. ವರ್ಕ್ ಆರ್ಡರ್ ಯಾವ ಗುತ್ತಿಗೆದಾರನಿಗೆ

ಕೊಟ್ಟಿದ್ದರೋ, ಆತ ಕೆಲಸ ಶುರು ಮಾಡಿ ಕೆಲಸ ನಿಲ್ಲಿಸಿಬಿಟ್ಟು ಹೋಗಿದ್ದಾನೆ. ಹೀಗಿರುವಾಗ ಸದ್ಯಕ್ಕೆ ಪುನಃ ಟೆಂಡರ್ ಏತಕ್ಕೆ ಕರೆಯಬೇಕಾಗಿತ್ತು?

ಶ್ರೀ ಜೆ.ಹೆಚ್. ಪಟೇಲ್ : ನನಗೆ ಕೇಳಿದಂತೆ ಮಾನ್ಯ ಸದಸ್ಯರು ಹೇಳಿದ್ದೇನೆಂದರೆ, ವರ್ಕ್ ಆರ್ಡರ್ ಇಶ್ಯೂ ಆಗಿ ಮೂರು ವರ್ಷವಾಯಿತು. ಅಲ್ಲಿ ಗುದ್ದಲಿ ಪೂಜೆಯೂ ಸಹ ಆಗಿತ್ತು. ಆ ಮೇಲೆ ಏನೋ ಆಗಿ ಕೆಲಸ ನಿಂತು ಹೋಗಿದೆ ಎಂದು ಅವರು ಹೇಳಿದರು.

ಶ್ರೀ ಪಿ.ಎಸ್. ಪ್ರಕಾಶ್ : ಅಲ್ಲಿ ಮೂರು ಸಲ ಗುದ್ದಲಿ ಪೂಜೆ ಆಗಿತ್ತು. ಗುತ್ತಿಗೆದಾರ ಕೆಲಸ ನಿಲ್ಲಿಸಿದ್ದಾನೆ. ಪೈಪುಗಳು ಅಲ್ಲಿ ಇನ್ನೂ ರಸ್ತೆ ಮೇಲೆಯೇ ಇವೆ. 1994ರಲ್ಲಿ ಅಲ್ಲಿ ಗುದ್ದಲಿ ಪೂಜೆಯಾಗಿತ್ತು.

ಶ್ರೀ ಜೆ.ಹೆಚ್. ಪಟೇಲ್ : ಅಲ್ಲಿ ಗುದ್ದಲಿ ಪೂಜೆ ಯಾರು ಮಾಡಿದ್ದರು? ಯಾವ ದಿನಾಂಕದಂದು ಮಾಡಿದ್ದರು? ಯಾರು ಆಗ ಕೆಲಸ ಪ್ರಾರಂಭ ಮಾಡಿದ್ದರು? ಏಕೆ ಕೆಲಸ ಕೈ ಬಿಟ್ಟರು ಎಂಬುದನ್ನು ಎನ್‌ಕ್ವೈರಿ ಮಾಡಿಸಿ ಆ ಬಗ್ಗೆ ಮಾನ್ಯ ಸದಸ್ಯರಿಗೆ ಬೆಂಗಳೂರು ನಗರಾಭಿವೃದ್ಧಿ ಸಚಿವರು ತಿಳಿಸುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ವಾಟರ್ ಸಪ್ಲೈನಲ್ಲಿ ಗುದ್ದಲಿ ಪೂಜೆಗೋಸ್ಕರ ವರ್ಕ್ ಆರ್ಡರ್ ಕೊಡುವುದು ಇದೆಯೇ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಗುದ್ದಲಿ ಪೂಜೆಯನ್ನು ಯಾರಾದರೂ ಮಂತ್ರಿಗಳೋ ಅಥವಾ ಉಪ-ಮುಖ್ಯಮಂತ್ರಿಗಳೋ ಮಾಡಿರುತ್ತಾರೆ. ಅವರನ್ನೆಲ್ಲಾ ನಾವು ಈಗ ಹುಡುಕಿ, ಆ ಗುದ್ದಲಿ ಹುಡುಕಿ, ಯಾರು ಮಾಡಿದರು, ಏಕೆ ಮಾಡಿದರು, ಎಂದುದನ್ನೆಲ್ಲಾ ನೋಡಬೇಕಾದರೆ ಅದಕ್ಕೊಂದು ಎನ್‌ಕ್ವೈರಿ ಕಮೀಷನ್ ಅಪಾಯಿಂಟ್ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಧಾಟಿ ನೋಡಿದರೆ ಹಾಗೇ ಇದೆ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೇ, ಹಳೆಯ ಪೈಪುಗಳನ್ನು ಬದಲಾವಣೆ ಮಾಡುವ ಪ್ರಕ್ರಿಯೆಯನ್ನು ಪ್ರಾಯಶಃ ನಮ್ಮ ಸರ್ಕಾರ ಬಂದ ಮೇಲೆ ಕೈಗೊಂಡಿದ್ದೇವೆ. ವಿಶೇಷವಾಗಿ ಇದು ಜನನಿಬಿಡ ಪ್ರದೇಶ ಎನ್ನುವುದನ್ನು ತಿಳಿದುಕೊಂಡು ಆ ಕೆಲಸ ಮಾಡಿದ್ದೇವೆ.

ಅಧ್ಯಕ್ಷರು : ಇಲ್ಲಿ ಚರ್ಚೆಯಾಗುತ್ತಿರುವ ಮೂಲ ವಿಚಾರ ಅದಕ್ಕೆ ಸಂಬಂಧಪಟ್ಟಿದಲ್ಲ. ಮಾನ್ಯ ಸದಸ್ಯರು ವರ್ಕ ಆರ್ಡರ್ ಆಗಿ ಮೂರು ವರ್ಷವಾಯಿತು ಎಂದರು. ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳ ಸೂಕ್ಷ್ಮವಾಗಿ ಯಾವಾಗ ಎಂದು ಕೇಳಿದರು. 1994ರಲ್ಲಿ ಕಾಮಗಾರಿ ಪ್ರಾರಂಭವಾಗಿದೆ ಎಂದರೆ ನಮಗೊಂದು ಅಂದಾಜು ಸಿಗುತ್ತದೆ. ಅದು ಚುನಾವಣಾ ವರ್ಷವಲ್ಲವೇ? ಯಾವ ತಿಂಗಳಿನಲ್ಲಿ ಆಗಿದೆ ಎಂದು ಊಹಿಸಬಹುದಾಗಿದೆ. ಸರಿ ಬಿಡಿ, ಆ ವಿಷಯವನ್ನೇನು ಚರ್ಚೆ ಮಾಡುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಚುನಾವಣಾ ವರ್ಷದಲ್ಲಿ ಆದ ಕೆಲಸಗಳಿಗೆ ಬೇರೆ ಇಲ್ಲವೆಂಬುದು. ತಮ್ಮ ಅಭಿಪ್ರಾಯವೇ? ಮೌನವಾಗಿ ತಾವು ಇದು ಸರಿಯಲ್ಲ ಎಂದು ಹೇಳಿಬಿಟ್ಟಿರಲ್ಲಾ, ಏನಿದರ ಅರ್ಥವೆಂದು ನನಗೆ ಗೊತ್ತಾಗಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಕ್ಷೇತ್ರದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತಿಲ್ಲ,, ಅಲ್ಲಿ ಬಹಳಷ್ಟು ವಾಟರ್ ಸಪ್ಲೈಸ್ ಸ್ಕೀಮ್ ಕಂಪ್ಲೀಟ್ ಆಗಿಲ್ಲ ಎಂದು ಒಂದೆರಡು ಬಾರಿ ಸದನದಲ್ಲಿ ಧರಣಿ ಮಾಡಿದ್ದರು. ಈ ಯೋಜನೆಗಳು ಏಕೆ ಕಂಪ್ಲೀಟ್ ಆಗಿಲ್ಲವೆಂದರೆ ಮಾನ್ಯ ವಾಟಾಳ್‌ರವರು ಅದಕ್ಕೆ ಸರಿಯಾಗಿ ಗುದ್ದಲಿ ಪೂಜೆ ಮಾಡಿಸಿಲ್ಲವೆಂದು ತೋರುತ್ತದೆ. ಅದಕ್ಕೇ ಯೋಜನೆಗಳೊಂದೂ ಜಾರಿಗೆ ಬಂದಿಲ್ಲ.

ವಿರಾಜಪೇಟೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಯೋಜನೆಗಳು.

393 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ವಿರಾಜಪೇಟೆ ತಾಲ್ಲೂಕಿನಲ್ಲಿ 1995-96, 1996-97, 1997-98ರ ಸಾಲಿನಲ್ಲಿ ಕೆರು ನೀರಾವರಿ ಯೋಜನೆಗಳ ಅನುಷ್ಠಾನ: ದುರಸ್ಥೀಕರಣ: ನವೀಕರಣ ಇವುಗಳಿಗಾಗಿ ಮಾಡಿರುವ ವೆಚ್ಚವೆಷ್ಟು? ಮತ್ತು ಯಾವ ಯಾವ ಕಾಮಗಾರಿಗಳ ಸಲುವಾಗಿ ವೆಚ್ಚ ಮಾಡಲಾಗಿದೆ? (ವಿವರ ನೀಡುವುದು)*

ಆ) *ವಿರಾಜಪೇಟೆ ತಾಲ್ಲೂಕಿನಲ್ಲಿ ನೀರಾವರಿ ಇಲಾಖೆಯು ಯಾವ ಯಾವ ಕಾಮಗಾರಿಗಳಿಗೆ ಆದ್ಯತೆ ನೀಡಬೇಕೆಂದು ಪಟ್ಟಿ ತಯಾರಿಸಿದೆ ಮತ್ತು ಅವು ಯಾವುವು?*

ಇ) *ಸರ್ಕಾರದ ಈ ಪಟ್ಟಿ ಅನ್ವಯ ವೆಚ್ಚ ಮಾಡಲು ಎಷ್ಟು ಹಣವನ್ನು 1998-99ರ ಸಾಲಿನಲ್ಲಿ ಮಂಜೂರು ಮಾಡಿರುತ್ತದೆ?*

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ) :

ಅ) ವಿವರಗಳನ್ನು ಅನುಬಂಧ-1 ಮತ್ತು 2ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ.

ಇ) 1998-99ನೇ ಸಾಲಿನಲ್ಲಿ ನಿಗದಿಪಡಿಸಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

1) ಸಣ್ಣ ನೀರಾವರಿ ವಲಯ - ರೂ.20.18 ಲಕ್ಷ

2) ಜಿಲ್ಲಾ ಪಂಚಾಯ್ತಿ ಕೊಡಗು ಜಿಲ್ಲೆ - ರೂ.10.00 ಲಕ್ಷ

ಈ ಅನುದಾನದ ತಾಲ್ಲೂಕುವಾರು ಮರುವಿಂಗಡಣೆ ಇನ್ನೂ ಮಾಡಿರುವುದಿಲ್ಲ.